# ಶಿಕ್ಷಕರೇ ನಿಜವಾದ ಶಿಲ್ಪಿಗಳು

ಡಾ. ಡಿ.ಕೆ.ರಾಜೇಂದ್ರ

ನಾಡನ್ನು ಕಟ್ಟುವ ರೂವಾರಿಗಳಲ್ಲಿ ಶಿಕ್ಷಕರ ಪಾತ್ರ ಹಿರಿದು. ಅವರು ಜವಾಬ್ದಾರಿಯನ್ನು ಅರಿತು ತಮ್ಮ ಕರ್ತವ್ಯವನ್ನು ಪಾಲಿಸಿದರೆ ದೇಶದ ಭವಿಷ್ಯ ಉಜ್ಜ್ವಲವಾಗುವುದರಲ್ಲಿ ಸಂದೇಹವಿಲ್ಲ. ಈ ಕುರಿತು ಬರೆದಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಚಿಂತನಪರ ಲೇಖನಗಳನ್ನು ಬರೆದಿದ್ದಾರೆ.



ಒಂದು ಮಾತಿದೆ : ''ಸರ್ಕಾರ, ಸೈನ್ಯ ಮಾಡಲಾಗದ್ದನ್ನು ಶಿಕ್ಷಕರು ಯಶಸ್ವಿಯಾಗಿ ಮಾಡಬಲ್ಲರು'' ಎಂದು. ಎಲ್ಲ ಕೆಲಸ ಕಾರ್ಯಗಳೂ ಕೇವಲ ಕಾನೂನಿನಿಂದ ಅಥವಾ ನಿಯಮಗಳಿಂದ ಯಶಸ್ವಿಗೊಳ್ಳುತ್ತವೆ ಎಂದು ಹೇಳುವಂತಿಲ್ಲ. ಕೆಲವೊಮ್ಮೆ ಅದಕ್ಕೆ ಹೊರತಾದವುಗಳಿಂದಲೇ ಅವು ಯಶಸ್ಸನ್ನು ಕಾಣಬಲ್ಲವು! ಯಾವುದೇ ಕ್ಷೇತ್ರದಲ್ಲಿ ಶಿಸ್ತು ಅಗತ್ಯ ನಿಜ! ಆದರೆ ಅದೊಂದೇ ಎಲ್ಲವೂ ಅಲ್ಲ. ಶಿಕ್ಷಕರು ಅದಕ್ಕೆ ಹೊರತಾಗಿಯೂ ತಮ್ಮ ವಿಶಿಷ್ಟತೆಯನ್ನು ತೋರಬೇಕಾಗುತ್ತದೆ. ಇತ್ತೀಚೆಗೆ ಪತ್ರಿಕೆಯಲ್ಲಿ ಬಿತ್ತರವಾದ ಒಂದು ಸುದ್ದಿ: ''ಕಾಲೇಜಿನ ಬೋಧನೆಯ ಗುಣಮಟ್ಟ ಸುಧಾರಣೆಗೆ ತಜ್ಞರ ಸಮಿತಿ ರಚನೆ'' ಎಂದು. ಉದ್ದೇಶ ಒಳ್ಳೆಯದೆ, ಆದರೆ ಅದರೊಂದಿಗೇ ಬೋಧಕರ ಗುಣಮಟ್ಟವೂ ಸುಧಾರಣೆಗೊಳ್ಳಬೇಕಾಗಿದೆ. ಏಕೆಂದರೆ, ಬೋಧನೆಯ ಗುಣಮಟ್ಟ ವಿದ್ಯಾರ್ಥಿಯ ಬೌದ್ಧಿಕ ಮಟ್ಟವನ್ನಷ್ಟೇ ಎತ್ತರಕ್ಕೆ ಏರಿಸುತ್ತದೆ. ಆದರೆ ನಿಜವಾದ ಅರ್ಥದಲ್ಲಿ ಅದಷ್ಟೇ ಶಿಕ್ಷಣ ಅಲ್ಲ. ಅದರ ಜೊತೆ ಜೊತೆಯಲ್ಲಿಯೇ ಅವರ ವ್ಯಕ್ತಿತ್ವದ ಬೆಳವಣಿಗೆಯೂ ಆಗಬೇಕಾಗಿದೆ. ಮೌಲ್ಯರಹಿತವಾದ ವಿದ್ಯೆ ಅನಾಹುತಗಳಿಗೆ ಎಡೆಮಾಡಿ ಕೊಡುತ್ತದೆ. ಮೌಲ್ಯಾಧಾರಿತ ಶಿಕ್ಷಣದ ಅಗತ್ಯವಿದೆ.

ಸ್ವಾಮಿ ವಿವೇಕಾನಂದರ ಒಂದು ಮಾತು ಸದಾ ನೆನಪಿಡಬೇಕಾದದ್ದು: ''ನಾವು ಏನಾಗಿಲ್ಲವೋ ಅದನ್ನು ಜನರಿಗೆ ತೋರ್ಪಡಿಸುವುದರಲ್ಲಿ ನಮ್ಮ ಶಕ್ತಿಯ ಹತ್ತನೆ ಒಂಬತ್ತು ಭಾಗ ವ್ಯಯವಾಗುತ್ತದೆ. ಆದರೆ ನಾವು ಏನಾಗಬೇಕೆಂದು ಬಯಸುವೆವೋ ಅದರಂತೆ ಸ್ವಾಭಾವಿಕವಾಗಿ ಆಗುವುದಕ್ಕೆ ಆ ಶಕ್ತಿಯನ್ನು ಬಳಸಿಕೊಳ್ಳುವುದೇ ಸರಿಯಾದ ಉಪಯೋಗ''. ಇಂದು ಬಹುತೇಕ ಶಿಕ್ಷಣ ಕ್ರಮದಲ್ಲಿ ಆಗುತ್ತಿರುವುದು ಇದು! ಅದರಿಂದಲೇ ಉದ್ಧಾರ ಎಂದು ಭಾವಿಸಿದಂತಿದೆ. ಆದರೆ ವಾಸ್ತವದ ಸಂಗತಿಯನ್ನು ಮರೆತಂತಿದೆ! ಗೋಡೆ ಭದ್ರವಾಗಿದ್ದರೆ ಅದರ ಮೇಲೆ

ಯಾವ ಚಿತ್ತಾರವನ್ನಾದರೂ ಬಿಡಿಸಬಹುದು, ಮರ ಆಳಕ್ಕೆ ಬೇರು ಬಿಟ್ಟುಗಟ್ಟಿಯಾಗಿ ನಿಂತರೆ ಅದು ಎಷ್ಟು ಭಾರವನ್ನಾದರೂ ತಡೆಯುತ್ತದೆ, ಎಂಥ ಬಿರುಗಾಳಿಯನ್ನಾದರೂ ಎದುರಿಸಿ ನಿಲ್ಲುತ್ತದೆ. ಶಿಕ್ಷಣದ ಮೂಲಕ, ಶಿಕ್ಷಕರ ಮೂಲಕ ಮೊದಲು ಆಗಬೇಕಾದದ್ದು ಈ ಬಗೆಯ ಕಾರ್ಯ. ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಮೊದಲು ಶಕ್ತಿಶಾಲಿಗಳನ್ನಾಗಿ ಮಾಡಬೇಕು. ಮನಸ್ಸು ದುರ್ಬಲವಾದರೆ ಯಾವ ಕೆಲಸವೂ ಸಾಧ್ಯವಾಗದು. ಅದರ ಸಿದ್ಧತೆ ಹೇಗಿರಬೇಕೆಂದರೆ ವಿವೇಕಾನಂದರೇ ಹೇಳುವಂತೆ: ''ಮನಸ್ಸಿನ ಶಕ್ತಿಯನ್ನು ಕೇಂದ್ರೀಕರಿಸಿ ಅದರ ಮೇಲೆಯೇ ಅದನ್ನು ತಿರುಗಿಸಿಬಿಡಬೇಕು. ಕೋರೈಸುತ್ತಿರುವ ಸೂರ್ಯನ ಕಿರಣಗಳೆದುರಿಗೆ ಕಗ್ಗತ್ತಲಿಂದ ತುಂಬಿದ ಸ್ಥಳಗಳೂ ತಮ್ಮ ರಹಸ್ಯವನ್ನು ಬಹಿರಂಗ ಪಡಿಸುವಂತೆ, ಈ ಕೇಂದ್ರೀಕೃತವಾದ ಮನಸ್ಸು ಅತಿ ಗಹನ ರಹಸ್ಯಗಳನ್ನೆಲ್ಲ ಭೇದಿಸಿಕೊಂಡು ಹೋಗುವುವು.''

ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಪಠ್ಯಕ್ರಮ ಅಷ್ಟೇ ಸಾಕು. ಆದರೆ, ಅವರ ಮಾನಸಿಕ ಬೆಳವಣಿಗೆಗೆ ಹಾಗೂ ಅದರ ಉತ್ತಮಿಕೆಗೆ ನಿಜವಾದ ಶಿಕ್ಷಕನ ಪ್ರಾಮಾಣಿಕ ಪ್ರಯತ್ನ ಅವಶ್ಯ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕನ ತ್ಯಾಗ ಮತ್ತು ಬದ್ಧತೆ ಅತಿ ಮುಖ್ಯವೆನಿಸುತ್ತದೆ. ಆ ಒಂದು ಹಿನ್ನೆಲೆಯಲ್ಲಿಯೇ ''ಸರ್ಕಾರ, ಸೈನ್ಯ ಮಾಡಲಾಗದ್ದನ್ನು ಶಿಕ್ಷಕರು ಯಶಸ್ವಿಯಾಗಿ ಮಾಡಬಲ್ಲರು'' ಎಂಬ ಮಾತು ಗಣ್ಯವೆನಿಸುತ್ತದೆ. ನಾವು ಬುದ್ಧಿಯ ಬೆಳವಣಿಗೆಗೆ ಒತ್ತು ಕೊಡುತ್ತಿದ್ದೇವೆ, ಹೃದಯವನ್ನು ಮರೆತಿದ್ದೇವೆ. ಬುದ್ಧಿಯ ಜೊತೆಗೆ ಹೃದಯವೂ ಶ್ರೀಮಂತಗೊಂಡಾಗ ಮಾತ್ರ ಶಿಕ್ಷಣ ಪೂರ್ಣಗೊಂಡಂತೆ.

ಶಿಕ್ಷಣ ಕ್ಷೇತ್ರ ಇಂದು ಸರ್ಟಿಫಿಕೇಟ್ ಕೊಡುವ ಫ್ಯಾಕ್ಟರಿಯಂತಾಗಿದೆ. ಅಲ್ಲಿಯ ವಿದ್ಯಾರ್ಥಿಗಳು ಹಗಲಿರುಳು ದುಡಿವ ಕಾರ್ಮಿಕರಂತಾಗಿದ್ದಾರೆ. ಇನ್ನು ಶಿಕ್ಷಕರು ತರಬೇತುದಾರರೆಂಬ ಭಾವನೆ ತಲೆದೋರಿದೆ. ಇದೆಲ್ಲವೂ ಸುಳ್ಳೆನಿಸಬೇಕಾದರೆ, ''ಶಿಕ್ಷಕರು ನಿಜವಾದ ಶಿಲ್ಪಿಗಳು'' ಎಂಬ ಮಾತು ನಿಜವಾಗಬೇಕಾದರೆ, ಮೂಲಭೂತವಾದ ಕೆಲವೊಂದು ಬದಲಾವಣೆಗಳು ಶಿಕ್ಷಣ ಕ್ಷೇತ್ರದಲ್ಲಿ ಅನಿವಾರ್ಯ. ಅದು ಸ್ವಾಮಿ ವಿವೇಕಾನಂದರ ಕನಸು. ಅವರು ಮೇಲಿಂದ ಮೇಲೆ ಆ ಕುರಿತು ಹೇಳುತ್ತ ಬಂದಿದ್ದಾರೆ. ವಿದ್ಯಾರ್ಥಿಗಳಲ್ಲಿ ಅವರ ಮಾನಸಿಕ ಶಕ್ತಿಯನ್ನು ಬಲಗೊಳಿಸುವ ಕೆಲಸ ಮೊದಲು ಆಗಬೇಕು. ಏಕೆಂದರೆ, ಮನಸ್ಸು ಬಲಗೊಂಡರೆ ಉಳಿದಿದ್ದೆಲ್ಲವೂ ಸುಗಮ. ಈ ಕಾರ್ಯ ಮನೆಯಿಂದ ಮಾತಾಪಿತೃಗಳ ಕಡೆಯಿಂದ ಆರಂಭಗೊಂಡು ಶಾಲೆಯಲ್ಲಿ ಶಿಕ್ಷಕರಿಂದ ಪೂರ್ಣಗೊಳ್ಳುವಂತಾಗಬೇಕು. ಶಿಕ್ಷಣ ಕೇವಲ ಜ್ಞಾನದ ವೃದ್ಧಿಗಾಗಿ ಅಲ್ಲ, ಅದು ಮಾನಸಿಕ ಬಲವರ್ಧನೆಗೂ ಕಾರಣವಾಗುವಂತಾಗಬೇಕು. ಶಿಕ್ಷಣ ವಿಷಯದ ಅರಿವಿಗೆ, ಜ್ಞಾನದ ವೃದ್ಧಿಗೆ ಆದರೆ, ಶಿಕ್ಷಕರ ಬೋಧನೆ ಮೌಲ್ಯಾಧಾರಿತ ಬದುಕಿಗೆ ಕಾರಣವಾಗುವಂತಾಗಬೇಕು. ಉತ್ತಮ ಚಾರಿತ್ರ್ಯವನ್ನು ರೂಪಿಸಲು ಪ್ರೇರಕವಾಗುವಂತಿರಬೇಕು. ಹಿಂದೆ Moral Science ಪಠ್ಯದ ಒಂದು ಭಾಗವಾಗಿತ್ತು. ಅದರಲ್ಲಿ ನೈತಿಕತೆಯನ್ನು ಬೋಧಿಸುವ ಕ್ರಮವಿತ್ತು. ಆದರೆ ಈಗ ಅದು ಪಠ್ಯಕ್ರಮದಿಂದ ಮಾಯವಾದಂತೆ ತೋರುತ್ತಿದೆ. ಬಹುಶಃ ಅದರ ಆವಶ್ಯಕತೆ ಇಲ್ಲ ಎಂಬ ಭಾವನೆ ಇದಕ್ಕೆ ಕಾರಣ ಅನಿಸುತ್ತದೆ! ಆದರೆ ಸ್ವಾಮಿ ವಿವೇಕಾನಂದರು ಹೇಳುವುದು: **''ಶಿಕ್ಷಣವೆಂದರೆ ಬರೀ ಓದಲ್ಲ, ಬರೀ ಪುಸ್ತಕ ಜ್ಞಾನವೂ ಅಲ್ಲ, ಅದು ಮಾನವತೆಯ ವಿಕಾಸ. ಕೆಲವೇ ಆದರ್ಶಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದವನು ಇಡೀ ಗ್ರಂಥಾಲಯವನ್ನೇ ಬಾಯಿಪಾಠ ಮಾಡಿರುವವನಿಗಿಂತ ಮೇಲು''.**

ಶಿಕ್ಷಕನ ಜವಾಬ್ದಾರಿ ಗೊತ್ತಾದ ಪಠ್ಯದ ವಿವರಣೆ ನೀಡುವುದಷ್ಟೇ ಅಲ್ಲ, ಆ ಮೂಲಕ ಶಿಷ್ಯನ ಮಾನಸಿಕ ಶಕ್ತಿಯನ್ನೂ ಅರಿತು ಅದನ್ನು ಬಲಗೊಳಿಸಿ ಉತ್ತಮ ಚಾರಿತ್ರ್ಯದ ಬೆಳವಣಿಗೆಗೆ ಕಾರಣವಾಗುವಂತಿರಬೇಕು. ವ್ಯಕ್ತಿತ್ವ ನಿರ್ಮಾಣ ಶಿಕ್ಷಣದ ಪರಮೋಚ್ಚ ಗುರಿಯಾದಾಗ ಮಾತ್ರ ಶಿಕ್ಷಣ ಹೆಚ್ಚು ಮಹತ್ವ ಪಡೆದುಕೊಳ್ಳಲು ಸಾಧ್ಯ. ಭಾರತೀಯ ಸಂಸ್ಕೃತಿಯ ಪ್ರಕಾರ ಆದರ್ಶ ವಿದ್ಯಾರ್ಥಿಯ ನಡವಳಿಕೆ ಹೇಗಿರಬೇಕೆಂಬುದನ್ನು ಸ್ವಾಮಿ ವಿವೇಕಾನಂದರು ಎಂಟು ಅಂಶಗಳ ಪಟ್ಟಿಮಾಡುತ್ತಾರೆ: ವಿದ್ಯಾರ್ಥಿಗಳು ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮಗಳಿವು. ಅದರಿಂದ ಜೀವನದಲ್ಲಿ ಶಿಸ್ತು, ಸಂಸ್ಕಾರ, ಶ್ರದ್ಧೆ, ಬದ್ಧತೆ ಎಲ್ಲವೂ ಮೈಗೂಡಿದಂತಾಗುತ್ತದೆ.

ಸ್ವಾಮಿ ವಿವೇಕಾನಂದರು ಸೂಚಿಸುವ ಆ ಎಂಟು ಅಂಶಗಳು ಹೀಗಿವೆ:

೧. ಕಡೆಯ ಪಕ್ಷ ಸೂರ್ಯೋದಯಕ್ಕೆ ಮುಂಚೆ ಏಳಬೇಕು. ಏಳುತ್ತಲೇ ಭಗವಂತನ ಸ್ಮರಣೆ ಮಾಡಬೇಕು. ದೇವರ ಪಟಕ್ಕೆ ಅಥವಾ ಮೂರ್ತಿಗೆ ನಮಸ್ಕರಿಸಬೇಕು. ಆ ಸಮಯದಲ್ಲಿ ಈ ಶ್ಲೋಕವನ್ನು ಹೇಳಿಕೊಳ್ಳಿ:

**ತ್ವಮೇವ ಮಾತಾ ಚ ಪಿತಾ ತ್ವಮೇವ ।**
**ತ್ವಮೇವ ಬಂಧುಶ್ಚ ಸಖಾ ತ್ವಮೇವ ।**
**ತ್ವಮೇವ ವಿದ್ಯಾ ದ್ರವಿಣಂ ತ್ವಮೇವ ।**
**ತ್ವಮೇವ ಸರ್ವಂ ಮಮ ದೇವದೇವ ।**

''ನೀನೇ ತಾಯಿ ಮತ್ತು ನೀನೇ ತಂದೆಯಾಗಿರುವೆ. ನೀನೇ ಬಂಧು ಮತ್ತು ನೀನೇ ಮಿತ್ರನಾಗಿರುವೆ. ನೀನೇ ವಿದ್ಯೆ, ನೀನೇ ಧನ, ಹೇ ದೇವ ದೇವ. ನನಗೆ ನೀನೇ ಸರ್ವಸ್ವವೂ ಆಗಿರುವೆ''.

೨) ಅನಂತರ ನಿಮ್ಮ ಮನೆಯ ಸಂಪ್ರದಾಯ ಮತ್ತು ಪದ್ಧತಿಗೆ ಅನುಸಾರವಾಗಿ, ಭಗವಂತನ ಉಪಾಸನೆ, ಜಪ, ಪೂಜೆ ಮುಂತಾದವುಗಳನ್ನು ಮಾಡಬೇಕು. ಬೆಳಗ್ಗೆ ಮತ್ತು ಸಾಯಂಕಾಲ ಇದು ನಿತ್ಯಕರ್ಮವಾಗಬೇಕು.

೩) ಇದೇ ರೀತಿ ಮನೆಯ ಹಿರಿಯರಿಗೆ ಹಾಗೂ ತಂದೆ-ತಾಯಿಗಳಿಗೆ ನಮಸ್ಕರಿಸುವುದೂ ಕೂಡ ನಿತ್ಯಕರ್ಮವೆನಿಸ ಬೇಕು. ಅದರ ಲಾಭ ಹೀಗಿದೆ:

**ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।**
**ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಮ್ ॥**

ತಂದೆ-ತಾಯಿಗಳ, ವೃದ್ಧರ ಸೇವೆ ಮಾಡುವುದರಿಂದ ಆಯಸ್ಸು ವೃದ್ಧಿಗೊಳ್ಳುತ್ತದೆ, ವಿದ್ಯೆ, ಯಶಸ್ಸು ದೊರೆಯುತ್ತದೆ.

೪) ಆಹಾರದಲ್ಲಿಯೂ ನಿಯಮಪಾಲನೆ ಅಗತ್ಯ. ಸಾತ್ವಿಕ ಹಾಗೂ ಆರೋಗ್ಯಪೂರ್ಣ ಆಹಾರ ಸೇವನೆ ಒಳ್ಳೆಯದು. ಜಿಡ್ಡು ಅಥವಾ ಕೊಬ್ಬಿನಿಂದ ಕೂಡಿದ ಆಹಾರ ಸೇವನೆ ಹೆಚ್ಚು ಆಲಸ್ಯ ವನ್ನುಂಟು ಮಾಡಿ ಆರೋಗ್ಯದ ಮೇಲೆಯೂ ಕೆಟ್ಟ ಪರಿಣಾಮ ಬೀರುತ್ತದೆ. ಚೆನ್ನಾಗಿ ಹಸಿದ ನಂತರವೇ ಊಟಮಾಡುವುದ ಒಳ್ಳೆಯದು.

೫) ನಿತ್ಯ ವ್ಯಾಯಾಮ ಅಗತ್ಯ. ಆಟ, ಓಟ ರೂಢಿಸಿ ಕೊಳ್ಳುವುದು ದೇಹದ ಬಲ ವರ್ಧನೆಗೆ ಅಗತ್ಯ ಹಾಗೂ ಆರೋ ಗ್ಯದ ರಕ್ಷಣೆಗೂ ಕಾರಣವಾಗುತ್ತದೆ. ಚುರುಕಾಗಿರಲು, ಮನ ಸ್ಸನ್ನು ಉಲ್ಲಾಸಗೊಳಿಸಲೂ ಸಹಾಯವಾಗುತ್ತದೆ.

೬) 'ವಿದ್ಯಾರ್ಥಿ' ಎಂದರೆ ವಿದ್ಯೆಯನ್ನು ಹುಡುಕಿಕೊಂಡು ಹೋಗುವವನು ಎಂದರ್ಥ. ಅದಕ್ಕೆ ಹೊರತಾಗಿ ಅನ್ಯ ಮಾರ್ಗ ದಲ್ಲಿ ಹೋಗದಂತೆ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಒಳ್ಳೆ ಯದು. ಹೊರ ಸುಲಭದ ಆಕರ್ಷಣೆಗಳಿಗೆ ಸೋಲಬಾರದು: ''ದುರಾಚಾರಿಯಾದ ಪುರುಷನನ್ನು ಲೋಕದ ಜನರು ಸದಾ ಕಾಲ ನಿಂದಿಸುತ್ತಾರೆ. ಅವನು ದುಃಖವನ್ನು ಅನುಭವಿಸುತ್ತಾನೆ. ಅವನ ಆಯುಸ್ಸು ಕೂಡ ಕಡಿಮೆಯಾಗುತ್ತದೆ.''

೭) ಪರಹಿತಕ್ಕೆ ಸಮನಾದ ಧರ್ಮವಿಲ್ಲ. ಪರಪೀಡೆಗೆ ಸಮ ನಾದ ಅಧರ್ಮವಿಲ್ಲ. ಯಾರ ಮನಸ್ಸಿನಲ್ಲಿ ಪರಹಿತ ಕಾಮನೆ ನೆಲೆಸಿದೆಯೋ, ಅವರಿಗೆ ಜಗತ್ತಿನಲ್ಲಿ ದುರ್ಲಭವಾದುದು ಯಾವುದೂ ಇಲ್ಲ. ಆದ್ದರಿಂದ ನಿಷ್ಕಾಮಭಾವದಿಂದ ಎಲ್ಲರೊಂ ದಿಗೂ ವರ್ತಿಸಬೇಕು.

೮) ಯಾವತ್ತೂ ಪ್ರಿಯವಾದ, ಹಿತವಾದ, ಸತ್ಯವಾದ ಮಾತುಗಳನ್ನಾಡಬೇಕು.

**ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್**
**ನ ಬ್ರೂಯಾತ್ ಸತ್ಯಮಪ್ರಿಯಮ್ ।**
**ಪ್ರಿಯಂ ಚ ನಾನೃತಂ ಬ್ರೂಯಾತ್**
**ಏಷ ಧರ್ಮ ಸನಾತನಃ ॥**

''ಸತ್ಯವನ್ನೇ ನುಡಿಯಬೇಕು. ಪ್ರಿಯವಾದುದನ್ನೇ ಮಾತ ನಾಡಬೇಕು. ಸತ್ಯವಾಗಿದ್ದೂ ಅಪ್ರಿಯವಾದುದ್ದನ್ನು ಮಾತನಾಡ ಬಾರದು. ಯಾವುದು ಅಪ್ರಿಯವಾಗಿದ್ದು ಅಸತ್ಯವಾಗಿದೆಯೋ ಅದನ್ನು ಆಡಬಾರದು. ಇದೇ ಸನಾತನ ಧರ್ಮ''.

ನಾವು ಕಲಿಯುವ ವಿದ್ಯೆಯಲ್ಲಿ, ಕಲಿಸುವ ವಿದ್ಯೆಯಲ್ಲಿ ಸ್ವಾಮಿ ವಿವೇಕಾನಂದರು ಹೇಳುವ ಈ ಸದ್ಗುಣಗಳು ಬೆರೆಯದೆ ಹೋದರೆ ಅಂತಹ ಶಿಕ್ಷಣ ಅವರೇ ಹೇಳುವಂತೆ 'ನಿಷ್ಪ್ರಯೋಜಕ'. ಏಕೆಂದರೆ, ''ಪಾವಿತ್ರ್ಯವೆಂಬುದು ಮಹಾನ್ ಶಕ್ತಿ, ಉಳಿದು ದೆಲ್ಲವೂ ಅದರ ಮುಂದೆ ತಲ್ಲಣಿಸುತ್ತದೆ'' ಎಂಬ ಮಾತೂ ಕೂಡ ಅದರ ಮಹತ್ವವನ್ನು ಸಾರುತ್ತದೆ.

ಜಗತ್ತಿನಲ್ಲಿ ಉಂಟಾಗುತ್ತಿರುವ ಎಲ್ಲ ತಲ್ಲಣಗಳಿಗೂ, ಶಿಕ್ಷಣ ದಲ್ಲಿ ಕಾಣೆಯಾಗಿರುವ ಇವುಗಳ ಕೊರತೆಯೇ ಮೂಲ ಕಾರಣ. ಬೌದ್ಧಿಕ ಬೆಳವಣಿಗೆಗಷ್ಟೇ ಒತ್ತುಕೊಟ್ಟು ನೈತಿಕತೆಯನ್ನು ಕಡೆ ಗಣಿಸಲಾಗುತ್ತದೆ. ಇದಕ್ಕೆ ಶಿಕ್ಷಣ ಪದ್ಧತಿಯಷ್ಟೇ, ಶಿಕ್ಷಕರ ಉದಾ ಸೀನದಷ್ಟೇ, ತಂದೆ-ತಾಯಿಗಳೂ ಜವಾಬ್ದಾರರಾಗುತ್ತಾರೆ. ನೈತಿಕ ಮೌಲ್ಯಗಳು ಕುಸಿಯುತ್ತಿವೆ, ಆರ್ಥಿಕ ಮೌಲ್ಯದ ಕಡೆ ಮನಸ್ಸು ಒಲೈಸುತ್ತಿದೆ. ಎಲ್ಲಾ ಅನಾಹುತಗಳಿಗೂ ಇದೇ ಮೂಲ ಕಾರಣ ವೆಂಬಂತಾಗಿದೆ. ಇವುಗಳ ದುಷ್ಪರಿಣಾಮ ಕಣ್ಣೆದುರಿಗೇ ಇದ್ದರೂ ಯಾರೂ ಎಚ್ಚೆತ್ತಂತೆ ಕಾಣದಿರುವುದು ದೊಡ್ಡ ದುರಂತ. ಶಿಕ್ಷಕರು ಮನಸ್ಸು ಮಾಡಿದರೆ ಈ ದೊಡ್ಡ ದುರಂತವನ್ನು ತಪ್ಪಿಸಲು ಸಾಧ್ಯ. ಏಕೆಂದರೆ, ಅವರೇ ನಿಜವಾದ ಶಿಲ್ಪಿಗಳು. *

## ಸುಭಾಷಿತಗಳು

**ದೀನಗೋಚರದಯಾಪರಿಹೀನಂ**
**ಯಸ್ಯ ಮಾನಸಮತೀವ ಕಠೋರಮ್ ।**
**ತೇನ ಭೂಮಿರತಿಭಾರವತೀಯಂ**
**ನ ದ್ರುಮೈರ್ನ ಗಿರಿಭಿರ್ನ ಸಮುದ್ರೈಃ ॥**

ದೀನರ ವಿಷಯದಲ್ಲಿ ದಯೆಯಿಲ್ಲದೆ ಯಾರ ಮನಸ್ಸು ಕಠೋರವಾಗಿರುತ್ತದೆಯೋ, ಅವನಿಂದ ಈ ಭೂಮಿಗೆ ಭಾರವಾಗಿದೆ ; ಅದು ಮರಗಳಿಂದಲ್ಲ, ಬೆಟ್ಟಗಳಿಂದಲ್ಲ, ಸಮುದ್ರಗಳಿಂದಲೂ ಅಲ್ಲ.

**ಯೋ ಯತ್ರ ಕುಶಲಃ ಕಾರ್ಯೇ**
**ತಂ ತತ್ರ ವಿನಯೋಜಯೇತ್ ।**
**ಕರ್ಮಸ್ವದೃಷ್ಟಕರ್ಮಾ ಯತ್**
**ಶಾಸ್ತ್ರಜ್ಞೋಽಪಿ ವಿಮುಹ್ಯತಿ ॥**

ಯಾರು ಯಾವ ಕೆಲಸದಲ್ಲಿ ನಿಪುಣನೋ ಅವನನ್ನು ಆ ಕೆಲಸದಲ್ಲಿ ನೇಮಿಸಬೇಕು. ತಾನು ಶಾಸ್ತ್ರಜ್ಞನಾಗಿದ್ದರೂ ತನಗೆ ಪರಿಚಯವಿಲ್ಲದ ಕೆಲಸಗಳಲ್ಲಿ ಒಬ್ಬನು ದಾರಿ ತಪ್ಪುತ್ತಾನೆ.